576(336) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಫಾರ್ಮ್‌ಗಳಿವೆ (ಜಿಲ್ಲಾವಾರು ವಿವರ ನೀಡುವುದು);

ಆ) ಈ ಫಾರ್ಮ್‌ಗಳು ಕಳೆದ ಮೂರು ವರ್ಷಗಳಲ್ಲಿ ರೈತರಿಗೆ ಅಥವಾ ಸಾರ್ವಜನಿಕರಿಗೆ ವಿತರಿಸಿದ ವಿವಿಧ ಬೀಜ, ಸಸಿ ಮತ್ತು ಗಿಡಗಳು ಯಾವುವು ಹಾಗೂ ವಿತರಿಸಿದ ಪ್ರಮಾಣ ಎಷ್ಟು;

ಇ) ನಷ್ಟದಲ್ಲಿರುವ ಫಾರ್ಮ್‌ಗಳು ಎಷ್ಟು? (ವಿವರ ನೀಡುವುದು)

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 415 ತೋಟಗಾರಿಕೆ ಕ್ಷೇತ್ರ / ಸಸ್ಯಾಗಾರಗಳಿವೆ. (ಜಿಲ್ಲಾವಾರು ಕ್ಷೇತ್ರ / ಸಸ್ಯಾಗಾರಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಈ ಫಾರಂಗಳು ಕಳೆದ ಮೂರು ವರ್ಷಗಳಲ್ಲಿ ಅಂದರೆ, 2001–02 ರಿಂದ 2003–04ರವರೆಗೆ ರೈತರಿಗೆ / ಸಾರ್ವಜನಿಕರಿಗೆ ಮಾವು, ಸಪೋಟ, ದಾಳಿಂಬೆ, ಗೋಡಂಬಿ, ಸೀಬೆ, ನಿಂಬೆ, ತೆಂಗು, ಕಾಳು ಮೆಣಸು, ಔಷಧಿ ಮತ್ತು ಸುಗಂಧ ದ್ರವ್ಯ ಗಿಡಗಳು, ಅಲಂಕಾರಿಕ ಗಿಡಗಳು, ಅಲಂಕಾರಿಕ ಗಿಡಗಳ ಬೀಜ ಮತ್ತು ತರಕಾರಿಗಳನ್ನು ವಿತರಿಸಲಾಗಿದೆ. ಒಟ್ಟು 159.31 ಲಕ್ಷ ಸಂಖ್ಯೆಯ ಕಸಿ / ಸಸಿಗಳು, 111 ಕೆ.ಜಿ. ಅಲಂಕಾರಿಕ ಸಸಿಗಳ ಬೀಜಗಳು ಹಾಗೂ 4542 ಕೆ.ಜಿ. ತರಕಾರಿ ಬೀಜಗಳನ್ನು ವಿತರಿಸಲಾಗಿದೆ.

ಇ) 192 ತೋಟಗಾರಿಕೆ ಫಾರಂಗಳು ನಷ್ಟದಲ್ಲಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ

ಕ್ರ.ಸಂ.	ಜಿಲ್ಲೆ	ಕ್ಷೇತ್ರಗಳ ಸಂಖ್ಯೆ	ನಷ್ಟದಲ್ಲಿರುವ ಕ್ಷೇತ್ರಗಳ ಸಂಖ್ಯೆ
1.	ಬೆಂಗಳೂರು ನಗರ	3	
2.	ಬೆಂಗಳೂರು ಗ್ರಾ	20	6
3.	ಕೋಲಾರ	33	14
4.	ತುಮಕೂರು	20	14
5.	ಚಿತ್ರದುರ್ಗ	16	7
6.	ದಾವಣಗೆರೆ	10	1
7.	ಶಿವಮೊಗ್ಗ	13	3

1	2	3	4
10.	ಮಂಡ್ಯ	27	18
11.	ಕೊಡಗು	10	6
12.	ಹಾಸನ	17	7
13.	ಚಿಕ್ಕಮಗಳೂರು	15	6
14.	ದಕ್ಷಿಣ ಕನ್ನಡ	15	6
15.	ಉಡುಪಿ	9	4
16.	ಬೆಳಗಾವಿ	28	15
17.	ಬಿಜಾಪುರ	9	3
18.	ಬಾಗಲಕೋಟೆ	7	1
19.	ಧಾರವಾಡ	8	2
20.	ಗದಗ	9	3
21.	ಹಾವೇರಿ	10	6
22.	ಉತ್ತರ ಕನ್ನಡ	17	10
23.	ಗುಲ್ಬರ್ಗಾ	18	8
24.	ಬೀದರ್	13	5
25.	ರಾಯಚೂರು	13	7
26.	ಬಳ್ಳಾರಿ	21	9
27.	ಕೊಪ್ಪಳ	13	7
	ಒಟ್ಟು	415	192

577(338) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಸರಹದ್ದಿನಲ್ಲಿರುವ ಗಿರಿವಿನ ಕೊಪ್ಪ–ತಡನಕತ್ರಿ ಪ್ರದೇಶದಲ್ಲಿರುವ ಮಹಿಳಾ ಸಂಘದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಣಸಿನಕಾಯಿ ಸಹಕಾರ ಸಂಘದ ವಿವರಗಳೇನು;

ಆ) ಈ ಸಹಕಾರ ಸಂಘಕ್ಕೆ ಸರ್ಕಾರ ನೀಡಿರುವ ಸಹಾಯ ಧನದ ಷೇರು ಮೊಬಲಗು ಎಷ್ಟು (ಈ ಸಂಘದ ಕಾರ್ಯವ್ಯಾಪ್ತಿಯ ವಿವರ ನೀಡುವುದು);

ಇ) ಈ ಸಂಘದ ವರ್ಷದ ಆದಾಯವೆಷ್ಟು (ಕಳೆದ ಮೂರು ವರ್ಷಗಳಲ್ಲಿ ಸಂಘವು ಗಳಿಸಿದ ಲಾಭ–ನಷ್ಟದ ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)